(*a*) whether it is a fact that Government has decided to supply water to 5 taluks of Tumkur district and Nagamangala taluk of Mandya district from Hemavathi Reservoir.

(*b*) If so, the extent of land for which water is to be let out for cultivation in each taluk,

(*c*) whether it is the intention of the Government to provide water to the above taluks immediately in order to take up the works expeniously?

SRI M. MALLIKARJUNA SWAMY (Minister for Education) (On behalf of SRI D. DEVARAJ URS (Chief minister).—

(*a*) This scheme is under the consideration of the Government.

(*b*) and (*c*) Do not arise in view of reply to clause above.

SUPPLY OF WATER FROM HEMAVATHI TO TIPTUR TALUK FOR IRRIGATION

513. SRI T. M. MANJUNATH (Tiptur).— Will the Chief Minister be pleased to state.—

(*a*) whether any survey is being made regarding the supply of water for irrigation from Hemavathi Project to Tiptur Taluk,

(*b*) if so, the extent of land (in acres) that will come under irrigation.

(*c*) the opinion of the concerned authorities regarding the supply of water from Hemavathi Project to Tiptur Taluk?

SRI M. MALLIKARJUNA SWAMY (Minister for Education) (On behalf of SRI D. DEVARAJ URS (Chief Minister) —

(a) Yes.

(*b*) Talukwise details are not finalised.

(*c*) It is feasible to irrigate Tiptur Taluk provided adequate water is available from Hemavathi under our share of waters in the Cauvery Basin.

ಶ್ರೀ ಎಂ. ಪೆಜ್. ಜಯಪ್ರಕಾಶ ನಾರಾಯಣ.—ಎರಡನೇ ಹಂತದಲ್ಲಿರುವ ಯೋಜನೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳು ಸೇರುತ್ತವೆ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ತುಮಕೂರು ಜಿಲ್ಲೆಯ ನಾಲ್ಕು ತಾಲ್ಲೂಕುಗಳು ಎಂದರೆ ತಿಪಟೂರು, ತುರುವೇಕೆರೆ, ತುಮಕೂರು ಹಾಗೂ ಕುಣಿಗಲ್ ಸೇರುತ್ತವೆ.

ಶ್ರೀ ಟಿ. ಎಂ. ಮಂಜುನಾಥ್.—ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಎಕರೆ ನೀರಾವರಿ ಪ್ರದೇಶಗಳಾಗುತ್ತವೆ ಎಂದು ನಿಮ್ಮ ಅಂದಾಜಿನಲ್ಲಿದೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ತಾಲ್ಲೂಕು ವೈಸ್ ಅಂಕೆಗಳನ್ನು ಕೊಡಲು ಇನ್ನೂ ಇದು ಫೈನಲೈಸ್ ಆಗಿಲ್ಲ. ಆದುದರಿಂದ ಇದರ ವಿವರಗಳು ಈಗ ಗೊತ್ತಾಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್.— ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಸುಮಾರು ಒಂದು ಲಕ್ಷ ಅರವತ್ತು ಸಾವಿರ ಎಕರೆಯಷ್ಟು ವ್ಯವಸಾಯದ ಭೂಮಿ ಇದೆ, ಆದರೆ ನಿಮ್ಮ ಅಂದಾಜು ಪ್ರಕಾರ ಸುಮಾರು ೧೦-೧೫ ಸಾವಿರ ಎಕರೆಗಳಲ್ಲಿ ಖುಷ್ಕಿ ಬೆಳೆಯಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಇಲ್ಲಿರುವ ಬಿದರೆ ಎನ್ನುವ ಗ್ರಾಮದಲ್ಲಿ ಒಂದು ಚಾನಲ್ ಬರುತ್ತದೆ ಇದು ಬಂದರೆ ಸುಮಾರು ಒಂದು ನೂರು ಎಕರೆ ಪ್ರದೇಶಗಳಿಗೆ ನೀರು ಸಿಗುತ್ತೆ ಎಂದು ಅಂದಾಜು ಮಾಡಿದ್ದರು. ಇದನ್ನು ಬೇಗನೆ ತೆಗೆದು ಕೊಳ್ಳುವ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಎರಡನೇ ಹಂತಕ್ಕೆ ಸುಮಾರು ೬೯ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಇದೆ. ಆದರೆ ಇದರ ವಿವರಗಳನ್ನೂ ಇನ್ನೂ ಪೂರ್ತಿಯಾಗಿ ವರ್ಕ್ ಔಟ್ ಮಾಡಿಲ್ಲ. ಈ ಮಾನ್ಯ ಸದಸ್ಯರು ಹೇಳಿರುವ ಅಭಿಪ್ರಾಯವನ್ನು ಆಗ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಅಂದಾನಯ್ಯ.—ಹೇಮಾವತಿ ಎರಡನೇ ಯೋಜನೆಗಾಗಿ ಹಣ ಎಷ್ಟು ಖರ್ಚು ಮಾಡಬೇಕೆಂದು ಅಂದಾಜು ಮಾಡಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ — ಈಗಾಗಲೇ ನಾನು ಹೇಳಿದ ಹಾಗೆ ಸುಮಾರು ೬೯ ಕೋಟಿ ರೂಪಾಯಿಗಳು ಎರಡನೇ ಸ್ಟೇಜಿನಲ್ಲಿ ಖರ್ಚಾಗುವ ಅಂದಾಜಿದೆ. ಇದರೊಳಗೆ ಸುಮಾರು ೫.೧೨ ಲಕ್ಷ ಎಕರೆಗಳಿಗೆ ನೀರು ಸಿಗಬಹುದು. ಇದರಲ್ಲಿ ರಬಿಗಾಗಿ ಸುಮಾರು ೨೭೩೫ ಎಕರೆಗೆಳಿಗೆ ಹಾಗೂ ಖರೀಫ್ ಗಾಗಿ ಸುಮಾರು ೨೩೮೫ ಎಕರೆಗಳಷ್ಟು ಪ್ರದೇಶಗಳಿಗೆ ನೀರು ಸಿಗಬಹುದು.

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್.— ಎರಡನೇ ಹಂತದ ಪರಿಶೀಲನೆಯಲ್ಲಿರುವುದರಿಂದ ತುಮಕೂರು ಹಾಗೂ ತುರುವೇಕೆರೆಗಳಲ್ಲಿ ಎಷ್ಟು ತಾಲ್ಲೂಕುಗಳನ್ನು ಸರ್ವೆ ಮಾಡಲಾಗಿದೆ ಎನ್ನುವ ಅಂಕಿ ಅಂಶಗಳೂ ಸರಕಾರದಲ್ಲಿರುವುದರಿಂದ ಅದನ್ನು ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—೧೮ನೇ ಸಪ್ಟೆಂಬರ್ ೧೯೬೭ರಲ್ಲಿ ಮೊದಲನೇ ಸ್ಟೇಜು ಎಂದು ಮಾಡಿ ಇದರ ಅಂದಾಜು ಮಾಡಿದ್ದು ಸುಮಾರು ೧೬-೩೦ ಲಕ್ಷ ರೂಪಾಯಿಗಳು. ಇದಾದ ಮೇಲೆ ಸುಮಾರು ಹನ್ನೊಂದು ಲಕ್ಷ ರೂಪಾಯಿಗಳ ಯೋಜನೆ ಒಂದನ್ನು ಮಾಡಿಸಲಾಗಿತ್ತು. ಇದರಲ್ಲಿ ಸುಮಾರು ೨೧-೭ ಟಿ. ಎಂ. ಸಿ. ನೀರು ಸಿಗುತ್ತೆ ಎಂದು ಅಂದಾಜು ಇತ್ತು. ಆಮೇಲೆ ೩೪ ಟಿ.ಎಂ.ಸಿ ನೀರು ಸಿಗುತ್ತೆ ಎಂದು ೧೯೭೧ನೇ ಇಸವಿಯಲ್ಲಿ ಅಂದಾಜು ಮಾಡಿದ್ದರು. ಇದರಿಂದ ಸುಮಾರು ಒಂದು ಲಕ್ಷ ಎಕರೆಗೆ ನೀರು ಸಿಗಬಹುದು ಎಂದು ಸುಮಾರು ೧೬-೩೦ ಲಕ್ಷ ರೂಪಾಯಿಗಳ ಒಂದು ಅಂದಾಜನ್ನು ತಯಾರಿಸಲಾಗಿತ್ತು. ಇದಕ್ಕೆ ಈಗಾಗಲೇ ಟೆಕ್ನಿಕಲ್ ಸ್ಯಾಂಕ್ಷನ್ ಮತ್ತು ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಎಂದು ಎಲ್ಲವನ್ನೂ ಕೊಡಲಾಗಿದೆ. ಇದರಿಂದ ಸುಮಾರು ಏಳು ಲಕ್ಷ ಎಕರೆಗೆ ಅನುಕೂಲವಾಗುತ್ತದೆ. ಇಷ್ಟು ನೀರನ್ನು ಕೊಡ ಬೇಕಾದರೆ ಇದರ ಖರ್ಚು ಸುಮಾರು ೧೬೦ ಕೋಟಿ ರೂಪಾಯಿಗಳವರೆಗೆ ಆಗಬಹುದು ಎಂದು ಎಸ್ಟೀ ಮೇಟನ್ನು ರಿವೈಸ್ ಮಾಡಿ ಈಗ ಇದು ಸಿ.ಪಿಂಡಬ್ಲ್ಯು ಸಿ. ಯವರ ಮುಂದೆ ಇದೆ. ಇನ್ನೂ ಎರಡನೇ ಯೋಜನೆ ಬಗ್ಗೆ ಯಾವ ಸರ್ವೆ ಕೂಡ ಆಗಿಲ್ಲದಿರುವುದರಿಂದ ಮತ್ತು ಪ್ರತಿಯೊಂದು ತಾಲ್ಲೂಕುಗಳ ವಿವರ ಗಳು ಬಂದಿಲ್ಲದೇ ಇರುವುದರಿಂದ ಇದರ ಬಗ್ಗೆ ಖಚಿತವಾಗಿ ಈಗಲೇ ಏನೂ ಹೇಳುವುದಕ್ಕಾಗುವುದಿಲ್ಲ ಮತ್ತು ಈ ಸ್ಟೇಜಿನಲ್ಲಿ ಇದು ಉದ್ಭವವಾಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.— ಹೇಮಾವತಿ ಯೋಜನೆಯಿಂದ ಎರಡನೇ ಹಂತದಲ್ಲಿ ಯಾವ ಯಾವ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ—ನಾಗಮಂಗಲ ಹಾಗೂ ಹಾಸನದ ಕೆಲ ಭಾಗಗಳಿಗೆ ಅನುಕೂಲ ವಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ.—ಇದರಲ್ಲಿ (೪)ಗೆ ಉತ್ತರವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಹೇಮಾವತಿಯಿಂದ ನಮ್ಮ ಪಾಲಿನ ನೀರು ಸಾಕಷ್ಟು ಪ್ರಮಾಣದಲ್ಲಿ ದೊರಕಿದಲ್ಲಿ ತಿಪಟೂರು ತಾಲ್ಲೂಕನ್ನು ನೀರಾವರಿಗೊಳಪಡಿಸುವುದು ಸಾಧ್ಯವಾಗುತ್ತದೆ ಎಂದು ಇಲ್ಲಿ ಹೇಳುತ್ತಾರೆ. ಆದರೆ ಮಾನ್ಯ ಮಂತ್ರಿಗಳು ಇಲ್ಲಿ ಹೇಳುವಾಗ ಒಂದು ರೀತಿ ಉತ್ತರ ಕೊಡುತ್ತಿರುವುದರಿಂದ ಇದು ಒಂದಕ್ಕೊಂದು ವ್ಯತ್ಯಾಸವಾಗುವು ದಿಲ್ಲವೇ? ಎರಡನೇ ಸ್ಟೇಜಿನಲ್ಲಿ ನಮ್ಮ ತಿಪಟೂರು ತಾಲ್ಲೂಕಿಗೆ ಎಷ್ಟು ನೀರು ಒದಗಿಸಿಕೊಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. —ಈಗಾಗಲೇ ಇದರ ಬಗ್ಗೆ ಉತ್ತರ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಮೂನ್ಯ ಮಂತ್ರಿಗಳು ಇಲ್ಲಿ ಇನ್ನೂ ಫೈನಲೈಸು ಆಗಿಲ್ಲ ಎಂದು ಹೇಳಿದರು. ಆದರೆ ಮಂತ್ರಿ ಮಂಡಲದ ಒಬ್ಬ ಸದಸ್ಯರು ಕುಣಿಗಲ್‌ಗೆ ಬಂದಾಗ ಅಲ್ಲಿ ಹೇಳುತ್ತಾ ಕುಣಿಗಲ್‌ಗೂ ಹಾಗು ತಿಪಟೂರಿಗೂ ನೀರು ಬಂತು ಎಂದು ಹೇಳಿರುವ ಹೇಳಿಕೆಗಳು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಎಲ್ಲಿ ಯಾವ ಸಂದರ್ಭದಲ್ಲಿ ಹೇಳಿದರು? ಅದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀಕೆ. ಹೆಚ್. ಹನುಮೇಗೌಡ.—ನಮ್ಮ ಹಾಸನ ತಾಲ್ಲೂಕಿನಲ್ಲೂ ಆಗಾಗ್ಗೆ ಬರಗಾಲಕ್ಕೆ ಸಿಗುವ ಪ್ರದೇಶಗಳೂ ಇವೆ ಮತ್ತು ತುಮಕೂರು ಜಿಲೆಯಲ್ಲೂ ನೀರಿಲ್ಲದೆ ಅಭಾವವಿರುವ ಕಡೆಗಳೂ ಇವೆ. ಇವೆರಡಕ್ಕೂ ಸೇರಿದಂತೆ ಬಲದಂಡೆ ನಾಲಾ ಮಾಡಿ ಒಂದು ಯೋಜನೆ ಮಾಡುತ್ತೇವೆಂದು ಹೇಳಿದ್ದರು. ಇದು ಯಾವ ಹಂತದಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಹಾಸನ ಜಿಲ್ಲೆಗೆ, ಹಾಗೂ ತುಮಕೂರು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಿಗೂ ಅನುಕೂಲವಾಗುವಂತೆ ಒಂದು ಯೋಜನೆ ಮಾಡಬೇಕೆಂದು ಇತ್ತು. ಹಾಸನದ ಜಿಲ್ಲೆಯಲ್ಲಿ ಹೇಮಾವತಿ ಎಡ ಹಾಗೂ ಬಲ ದಂಡೆ ನಾಲಾಗಳನ್ನೂ ಹೈ ಲೆವೆಲ್‌ನಲ್ಲಿ ತರಬೇಕೆಂದೂ ಇದೆ. ಆ ಉದ್ದೇಶದಿಂದಲೇ ಈ ಯೋಜನೆಯನ್ನು ತೆಗೆದುಕೊಂಡಿರತಕ್ಕದ್ದು.

ಶ್ರೀ ಅಂದಾನಯ್ಯ.— ರಾಜ್ಯ ಮಟ್ಟದಲ್ಲಿರುವ ಈ ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿದೆಯೇ ಹಾಗೇ ಕಳುಹಿಸಿರುವುದು ಏನಾದರೂ ಮೂರ್ಪಾಡಾಗಿ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಈಗಾಗಲೇ ಇದನ್ನು ಸಿ. ಡಬ್ಲ್ಯು.ಪಿ.ಸಿ.ಗೆ ಕಳುಹಿಸಲಾಗಿದೆ.

WATER TO TUMKUR DISTRICT FROM BHADRA CHANNEL

570. SRI N BASAVAIAH (Chikkanayakanahalli).— Will the Chief Minister be pleased to state.—

(a) the prospects of bringing water to Tumkur district from Bhadra Channel in light of the recent report of the K.G. Commission

(b) whether the proposed scheme of bringing water to Tumkur District is feasible as per the inter State distribution of water, if not, the alternative for it,

(c) whether Government would provide sufficient funds in the current year's budget to complete the channel works of Hemavathi Project to supply water to Tumkur district as to raise crops by the end of this year?

SRI M. MALLIKARJUNA SWAMY (Minister for Education) (On behalf of SRI D. DEVARAJ URS (Chief Minister).—

(a) No possibility.

(b) Not feasible. The alternative is to bring water from Hemavathi Project.

(c) The extention of the Hemavathi Canal to Tumkur is part of the Second stage of the Hemavathi Project which is not yet approved.